# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 689 (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವರ್ಗಾಯಿತ) |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12-12-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲೂಕು ಅಳದಂಗಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅಳದಂಗಡಿ ವೇಣೂರು ಸಂಪರ್ಕ ರಸ್ತೆ ಇದ್ದು, ಒಂದು ಕಿ.ಮೀ ನ ನಡಾಯಿ ಎಂಬಲ್ಲಿ ಈ ಹಿಂದೆ ನಿರ್ಮಿಸಲಾದ ಸೇತುವೆ ಸಂಪೂರ್ಣವಾಗಿ ಶಿಥಿಲಗೊಂಡಿದ್ದು, ವಾಹನ ಸಂಚಾರಕ್ಕೆ ಅತ್ಯಂತ ದುಸ್ತರವಾಗಿರುವುದರಿಂದ ಗ್ರಾಮೀಣ ಭಾಗದ ಆ ಜನರ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ನಡಾಯಿ ಸೇತುವೆಯು 7.50ಮೀ ಉದ್ದ ಹಾಗೂ 5.00ಮೀ. ಅಗಲವಿದ್ದು, ಶಿಥಿಲಾವಸ್ಥೆಯಲ್ಲಿರುವುದರಿಂದ ತುರ್ತು ದುರಸ್ಥಿಯಂತೆ ಸೇತುವೆಯ ಎರಡೂ ಬದಿಯ ಅಪ್ರೋಚ್ ಸ್ಲ್ಯಾಬ್ ದುರಸ್ಥಿ, 4 ಬದಿಯ ಸೈಡ್ ಸ್ಲೋಪ್‌ಗಳಿಗೆ ಪಿಚ್ಚಿಂಗ್ ಅಳವಡಿಸಿಕೊಳ್ಳಲು ರೂ.5.50 ಲಕ್ಷಗಳಿಗೆ ದುರಸ್ತಿ ಕಾಮಗಾರಿಯು ಅನುಮೋದನೆ ಗೊಂಡಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ, ಗುತ್ತಿಗೆದಾರರನ್ನು ನಿಗದಿಪಡಿಸಿಕೊಂಡು ಸದರಿ ಸೇತುವೆಯ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗಿದೆ.<br><br>ಸೇತುವೆ ದುರಸ್ತಿ ಕಾಮಗಾರಿ ಕೈಗೊಂಡ ನಂತರ ಮುಂದಿನ ದಿನಗಳಲ್ಲಿ ಹೊಸದಾಗಿ ಸೇತುವೆ ಪುನರ್ ನಿರ್ಮಾಣದ ಬಗ್ಗೆ ಪರಿಶೀಲಿಸಲಾಗುವುದು. |
| ಆ | ಬಂದಿದ್ದಲ್ಲಿ, ಸಂಪೂರ್ಣವಾಗಿ ಶಿಥಿಲಗೊಂಡಿರುವ ನಡಾಯಿ ಎಂಬಲ್ಲಿ ನಿರ್ಮಿಸಲಾಗಿರುವ ಸದರಿ ಸೇತುವೆಯನ್ನು ಇದುವರೆಗೆ ಹೊಸದಾಗಿ ನಿರ್ಮಾಣ ಮಾಡಲು ಸರ್ಕಾರ ಇನ್ನೂ ಅಗತ್ಯ ಕ್ರಮ ವಹಿಸದಿರಲು ಕಾರಣಗಳೇನು: | |
| ಇ | ಸದರಿ ಈ ಸೇತುವೆ ಸಂಪೂರ್ಣವಾಗಿ ಶಿಥಿಲಗೊಂಡಿದ್ದು, ಅದನ್ನು ಕೂಡಲೇ ಹೊಸದಾಗಿ ನಿರ್ಮಾಣ ಮಾಡುವುದರ ಜೊತೆಗೆ ಇಕ್ಕಲಗಳಲ್ಲಿ ತಡೆಗೋಡೆ ಕೂಡ ನಿರ್ಮಾಣ ಮಾಡಬೇಕಾದ ತುರ್ತು ಅನಿವಾರ್ಯತೆ ಇದ್ದು, ಯಾವ ಕಾಲಮಿತಿಯೊಳಗೆ ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸ ಲಾಗುವುದು? | |

ಕಡತ ಸಂಖ್ಯೆ: ಲೋಇ 115 ಸಿಬಿಆರ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು